# ತಾರೆಯರ ದುಬಾರಿ ಖಯಾಲಿ ಅನುರಾಗ್ ಕಶ್ಯಪ್ ಟೀಕೆ ಟಿಪ್ಪಣಿ




ಕಡ್ಡಿ ತುಂಡು ಮಾಡಿದಂತೆ ಮಾತನಾಡುವುದಕ್ಕೆ ಅನುರಾಗ್ ಕಶ್ಯಪ್ ಹೆಸರುವಾಸಿ. ಸಿನಿಮಾ ವ್ಯಾಕರಣದ ವಿಷಯದಲ್ಲಿ ಕಚ್ಚಾ ಧೋರಣೆ ಇಟ್ಟುಕೊಂಡಿರುವ ಅವರು ಟೀಕೆಗಳನ್ನು ಕೂಡ ಎದುರಿಸಿದವರು. ರಾಮ್‌ಗೋಪಾಲ್ ವರ್ಮ ಶೈಲಿಗೆ ಇನ್ನೊಂದು ಬಗೆಯ ಆಯಾಮ ದಕ್ಕಿಸಿಕೊಟ್ಟ ಸಿನಿಮಾ ಮಾಡುವವರ ಪೈಕಿ. ಅವರು ಮೊನ್ನೆ ಮೊನ್ನೆ ದೊಡ್ಡ ಬಜೆಟ್‌ನ ಸಿನಿಮಾಗಳ ಹಳವಂಡದ ಕುರಿತು ಬಹಳ ಆಸಕ್ತಿಕರವಾದ ಸಂಗತಿಗಳನ್ನು ಹಂಚಿಕೊಂಡರು.

ದಶಕಗಳ ಹಿಂದೆ ಬಿ.ಆರ್. ಪಂತುಲು, ಆರ್. ನಾಗೇಂದ್ರರಾಯರು ಕನ್ನಡ ಚಿತ್ರರಂಗವನ್ನು ಕಟ್ಟುತ್ತಿದ್ದ ಸಂದರ್ಭದಲ್ಲಿ ಚಿತ್ರರಂಗದಲ್ಲಿ ಸಂಬಳ ಕೊಡುವ ಪರಿಪಾಟ ಇತ್ತು. ವಜ್ರೇಶ್ವರಿ ಕಂಬೈನ್ಸ್ ಚುಕ್ಕಾಣಿಯನ್ನು ಪಾರ್ವತಮ್ಮ ರಾಜಕುಮಾರ್ ಹಿಡಿದಿದ್ದಾಗಲೂ, ನಟಿಸಿದವರಿಗೆ ಮೊದಲೇ ಒಪ್ಪಿಕೊಂಡಿದ್ದ ಸಂಭಾವನೆಯನ್ನು ತಕ್ಷಣವೇ ಕೊಡುತ್ತಿದ್ದುದರ ಬಗೆಗೂ ಹಲವು ಆಸಕ್ತಿಕರ ಘಟನೆಗಳನ್ನು ನೆನಪಿಸಿಕೊಳ್ಳುವವರು ಇದ್ದಾರೆ. ಕ್ರಮೇಣ ವ್ಯಾನಿಟಿ ವ್ಯಾನ್‌ಗಳ ಭರಾಟೆ ಶುರುವಾಗತೊಡಗಿತು. ಚಿತ್ರೀಕರಣಕ್ಕೆ ಮೊದಲು ಹಾಗೂ ನಂತರ ವಿರಮಿಸಲು ಅಥವಾ ಮೇಕಪ್ ಹಾಕಿಸಿಕೊಂಡು ಸಿದ್ಧವಾಗಲು ಇಂತಹ ವ್ಯಾನಿಟಿ ವ್ಯಾನ್‌ಗಳು ಈಗ ಮುಖ್ಯವಾಗಿವೆ. ಅನುರಾಗ್ ಕಶ್ಯಪ್ ಕಣ್ಣಿಗೆ ಇವು ಬಜೆಟ್ ವಿಸ್ತರಣೆಯ ಸಂಕೇತದಂತೆ ಕಾಣುತ್ತಿವೆ.

'ಸೇಕ್ರೆಡ್ ಗೇಮ್ಸ್' ವೆಬ್ ಸರಣಿಯ ಚಿತ್ರೀಕರಣ ನಡೆದಾಗ ಅನುರಾಗ್ ವ್ಯಾನಿಟಿ ವ್ಯಾನ್‌ಗಳನ್ನು ದೊಡ್ಡ ಸಂಖ್ಯೆಯಲ್ಲಿ ಮೊದಲು ಕಂಡರು. ಅದಕ್ಕೂ ಮೊದಲು ಕೆಲವು ಸಿನಿಮಾಗಳನ್ನು ನಿರ್ದೇಶಿಸಿದ್ದ ಅವರಿಗೆ ಉದ್ಯಮ ಎಷ್ಟೊಂದು ಬದಲಾಗಿದೆ ಎಂದು ಅನಿಸಿದ್ದೇ ಆಗ.

'ಸಿನಿಮಾ ತಯಾರಿಯಲ್ಲಿ ನಿರ್ಮಾಣ ಸಂಸ್ಥೆ ನಿರ್ದಿಷ್ಟ ಬಜೆಟ್ ನಿಗದಿಪಡಿಸುತ್ತದೆ. ಮೊದಲೆಲ್ಲ ಸಿನಿಮಾ ನಿರ್ದೇಶಿಸುವಾಗ ಬಹುತೇಕ ಹಣವು ಸಿನಿಮಾ ತಯಾರಿಗಾಗಿಯೇ ವ್ಯಯವಾಗಬೇಕು ಎಂದು ನಾನು ನಂಬಿದ್ದೆ. ಅದಕ್ಕೆ ತಕ್ಕಹಾಗೆಯೇ ಖರ್ಚನ್ನು ಹಿತಮಿತವಾಗಿ ಮಾಡುವ ದಾರಿಗಳನ್ನೂ ಹುಡುಕುತ್ತಿದ್ದೆವು. ಈಗ ತಂತ್ರಜ್ಞರಿಗೆ ಒಳ್ಳೆಯ ಹಣ ಸಿಗುತ್ತಿದೆ ಎನ್ನುವುದು ಒಳ್ಳೆಯ ಬೆಳವಣಿಗೆ. ಆದರೆ, ಸಮಸ್ಯೆ ಇರುವುದು ಅನಗತ್ಯ ಬೇಡಿಕೆಗಳನ್ನು ತಾರಾ ವರ್ಚಸ್ಸಿನ ನಟ–ನಟಿಯರು ಮುಂದಿಡುತ್ತಿರುವುದರಲ್ಲಿ. ಕಾಡಿನಲ್ಲಿ ಚಿತ್ರೀಕರಣ ನಡೆಯುತ್ತಿದೆ ಎಂದಿಟ್ಟುಕೊಳ್ಳಿ. ಅಮೆರಿಕನ್ ಬರ್ಗರ್ ತರಲು ಮೂರು ತಾಸು ದೂರದ ನಗರಕ್ಕೆ ವಾಹನವೊಂದು ಹೋಗಿ, ಬರುತ್ತದೆ. ಇದಕ್ಕೆ ಏನನ್ನುವುದೋ ತಿಳಿಯುತ್ತಿಲ್ಲ' – ಅನುರಾಗ್ ಹೀಗೆ ಹೇಳುತ್ತಾ ತಮ್ಮದೇ ಶೈಲಿಯ ನಗು ನಕ್ಕರು.

ಅನುರಾಗ್ ನಿರ್ದೇಶಿಸಿರುವ 'ಕೆನೆಡಿ' ಚಿತ್ರವು ತೆರೆಕಾಣಬೇಕಿದೆ. ಮಲಯಾಳಂ ನಟ ಜೋಜು ಜಾರ್ಜ್ ಅವರನ್ನು ಪ್ರಮುಖ ಪಾತ್ರವೊಂದಕ್ಕೆ ನಿಕ್ಕಿ ಮಾಡಿರುವ ಮತ್ತೊಂದು ಚಿತ್ರವನ್ನೂ ಅವರು ಈಗಾಗಲೇ ಪ್ರಕಟಿಸಿದ್ದಾರೆ. ಇದೇ ಮೊದಲ ಬಾರಿಗೆ ಹಿಂದಿ ಸಿನಿಮಾದಲ್ಲಿ ಜೋಜು ನಟಿಸುತ್ತಿದ್ದಾರೆ.

ದೊಡ್ಡ ಬಜೆಟ್ ಎನ್ನುವುದು ಅತಿ ದೊಡ್ಡ ಬಜೆಟ್ ಹೇಗಾಗುತ್ತದೆ ಎನ್ನುವುದಕ್ಕೆ ಉದಾಹರಣೆಗಳನ್ನು ಕೊಟ್ಟಿರುವ ಅನುರಾಗ್, ಆ ಸಿನಿಮಾಗಳು ಯಾಕೆ ಸೋಲುತ್ತಿವೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಎಂಬ ವ್ಯಂಗ್ಯೋಕ್ತಿಯನ್ನೂ ಕಿವಿಮೇಲೆ ಹಾಕಿದರು.

# ಮತ್ತೇಕೆ ರಾಮಾಯಣ? 'ಟೀವಿ ಸೀತೆ'ಯ ಪ್ರಶ್ನೆ



ಇದೀಗ ಚಿತ್ರೀಕರಣ ನಡೆಯುತ್ತಿರುವ, ರಣಬೀರ್ ಕಪೂರ್ ಅಭಿನಯದ 'ರಾಮಾಯಣ' ಸಿನಿಮಾ ಬಗೆಗೆ ದೀಪಿಕಾ ಚಿಖ್ಲಿಯಾ ಮಾತನಾಡಿದ್ದಾರೆ. 1980ರ ದಶಕದಲ್ಲಿ ಟೀವಿಯಲ್ಲಿ ಮೂಡಿಬಂದ 'ರಾಮಾಯಣ' ಧಾರಾವಾಹಿಯಲ್ಲಿ ಸೀತೆ ಪಾತ್ರದಲ್ಲಿ ಅಭಿನಯಿಸಿದ್ದವರೇ ಈ ದೀಪಿಕಾ. ಕನ್ನಡದಲ್ಲಿ ಅಂಬರೀಷ್ ಅಭಿನಯದ ಸಿನಿಮಾದಲ್ಲಿಯೂ ಅವರು ನಾಯಕಿಯಾಗಿ ನಟಿಸಿದ್ದರು.

ರಾಮಾಯಣ ಸಿನಿಮಾವನ್ನು ಪದೇ ಪದೇ ಮಾಡಬಾರದು ಎನ್ನುವುದು ದೀಪಿಕಾ ಅವರ ಅಭಿಪ್ರಾಯ.

ರಾಮಾಯಣಕ್ಕೆ ಅದರದ್ದೇ ಘನತೆ ಇದೆ. ಹೊಸದಾಗಿ ಏನನ್ನೋ ಹೇಳಬೇಕು ಎಂದು ಬೇರೆ ದೃಷ್ಟಿಕೋನವನ್ನೋ, ಪಾತ್ರಗಳ ವಸ್ತ್ರ ಹಾಗೂ ನೋಟದಲ್ಲಿ ಬದಲಾವಣೆಗಳನ್ನೋ ಅಳವಡಿಸಿಕೊಳ್ಳುತ್ತಾರೆ. ಇದರಿಂದ ಆ ಘನತೆಗೆ ಮುಕ್ಕಾಗುತ್ತದೆ ಎಂದು ದೀಪಿಕಾ ಹೇಳಿದರು.

'ಆದಿಪುರುಷ್' ಸಿನಿಮಾದಲ್ಲಿ ಸೀತೆ ಪಾತ್ರ ಮಾಡಿದ್ದ ಕೃತಿ ಸನೋನ್ ಅವರಿಗೆ ಸ್ಯಾಟಿನ್ ಸೀರೆ ಉಡಿಸಿದ್ದನ್ನು ಹಾಗೂ ರಾವಣನ ಪಾತ್ರಧಾರಿ ಸೈಫ್ ಅಲಿ ಖಾನ್ ಅವರಿಗೆ ಸೈಡ್‌ಬರ್ನ್ ಇದ್ದುದನ್ನು ದೀಪಿಕಾ ತಮ್ಮ ಅಭಿಪ್ರಾಯ ಸಮರ್ಥಿಸಲು ಉದಾಹರಣೆಗಳನ್ನಾಗಿ ಕೊಟ್ಟರು.

ರಾಮಾಯಣವನ್ನು ಮರುಸೃಷ್ಟಿ ಮಾಡಲು ಹೋಗಿ ಗೊಂದಲಕ್ಕೆ ಕಾರಣರಾಗುತ್ತಿದ್ದಾರೆ ಎಂದೂ ಅವರು ಮಾತು ಸೇರಿಸಿದರು.